

ಕಾದಂಬರಿಕಾರ ಬೆನ್ಯಾಮಿನ್

ಶಾನಭಾಗರು ಮುಖ್ಯಸ್ಥರಾಗಿದ್ದರು ಎನ್ನುವುದು ಮತ್ತೊಂದು ವಿಶೇಷ. ಒಟ್ಟಾರೆಯಾಗಿ ದಕ್ಷಿಣ ಭಾರತದ ಸಾಹಿತ್ಯದತ್ತ ಇಂಗ್ಲಿಷ್ ಓದುಗರು ಒಲಿಯುತ್ತಿರುವುದು ಮತ್ತು ಹೊಸ ಲೋಕದ ಅನುಭವಕ್ಕೆ ಅವರು ತೆರೆದುಕೊಳ್ಳುತ್ತಿರುವುದು ಸ್ಪಷ್ಟವಾಗುತ್ತದೆ.

ಈ ಜೆಸಿಬಿ ಪ್ರಶಸ್ತಿಯು ಈ ವರ್ಷವೇ ಪ್ರಾರಂಭಗೊಂಡಿದೆ. ಈ ಬಹುಮಾನದ ಮೊತ್ತ 25 ಲಕ್ಷ ರೂಪಾಯಿಗಳು! ಜೊತೆಗೆ ಅನುವಾದದ ಪುಸ್ತಕವಾಗಿದ್ದರೆ, ಅನುವಾದಕರಿಗೆ ಐದು ಲಕ್ಷ ರೂಪಾಯಿಗಳ ಬಹುಮಾನವನ್ನೂ, ಅಂತಿಮ ಪಟ್ಟಿಯಲ್ಲಿ ಆಯ್ಕೆಗೊಂಡ ಐದು ಪುಸ್ತಕಗಳ ಲೇಖಕರಿಗೆ ತಲಾ ಒಂದು ಲಕ್ಷ ರೂಪಾಯಿಗಳ ಬಹುಮಾನವನ್ನೂ ನೀಡಲಾಗುತ್ತದೆ. ಈ ಬಹುಮಾನದ ಮೊತ್ತ ನಮ್ಮ ಜ್ಞಾನಪೀಠ ಪ್ರಶಸ್ತಿ ಮತ್ತು ಸರಸ್ವತಿ ಸಮ್ಮಾನ್‌ಗಿಂತಲೂ ಜಾಸ್ತಿಯಿದೆ. ಹಾಗಂತ ಕೇವಲ ಹಣದ ಕಾರಣದಿಂದಾಗಿಯೇ ಈ ಪ್ರಶಸ್ತಿ ಮುಖ್ಯವೆನ್ನಿಸುವುದಿಲ್ಲ. ದೇಶೀಯ ಭಾಷೆಗಳಿಗೆ ಅವು ನೀಡಿರುವ ಮಹತ್ವದಿಂದಾಗಿ ಈ ಪ್ರಶಸ್ತಿ ನಮ್ಮ ಗಮನ ಸೆಳೆಯುತ್ತದೆ. ಕೇವಲ ಪುಸ್ತಕ ಪ್ರಕಾಶಕರು ಮಾತ್ರ